# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | **1374** |
| ಸದಸ್ಯರ ಹೆಸರು | : | ಕೆ. ಎ. ತಿಪ್ಪೇಸ್ವಾಮಿ<br>(ನಾಮನಿರ್ದೇಶನ ಹೊಂದಿದವರು) |
| ಉತ್ತರಿಸುವ ದಿನಾಂಕ | : | 30.12.2022 |
| ಉತ್ತರಿಸುವ ಸಚಿವರು | : | ಕೃಷಿ ಸಚಿವರು |

| | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯಕ್ಕೆ ಕಳೆದ 3 ವರ್ಷಗಳಲ್ಲಿ ಕೇಂದ್ರ ಸರ್ಕಾರದ ಸಂಯೋಜಿತ ತೋಟಗಾರಿಕೆ ಅಭಿವೃದ್ಧಿ ಅಭಿಯಾನ (MIDH) ಕೃಷಿ ಮೂಲ ಸೌಕರ್ಯ ನಿಧಿ (AIF) ಅಡಿ ದೊರೆತಿರುವ ಅನುದಾನವೆಷ್ಟು ಹಾಗೂ ಈ ಅನುದಾನವನ್ನು ಯಾವ ರೀತಿ ಬಳಸಿಕೊಳ್ಳಲಾಗಿದೆ; (ಜಿಲ್ಲಾವಾರು ಮತ್ತು ವರ್ಷವಾರು ಪೂರ್ಣ ಮಾಹಿತಿ ನೀಡುವುದು) | ಕೇಂದ್ರ ಸರ್ಕಾರವು ಹೊಸ ಕೇಂದ್ರ ಪುರಸ್ಕೃತ "ಕೃಷಿ ಮೂಲಭೂತ ಸೌಕರ್ಯ ನಿಧಿ ಅಡಿಯಲ್ಲಿ ಹಣಕಾಸು ಸೌಲಭ್ಯಗಳು" (Financing facility under Agriculture Infrastructure Fund) ಯೋಜನೆಯನ್ನು ಪ್ರಾರಂಭಿಸಿದ್ದು, ಯೋಜನೆಯಡಿಯಲ್ಲಿ ಕೊಯ್ಲಿನೋತ್ತರ ನಿರ್ವಹಣೆಗಾಗಿ ಮೂಲ ಸೌಕರ್ಯಗಳನ್ನು ಸೃಷ್ಟಿಸಲು ಮತ್ತು ಸಾಮೂಹಿಕ ಕೃಷಿ ಆಸ್ತಿಯನ್ನು ಸೃಷ್ಟಿಸಲು ಹಣಕಾಸು ಸಂಸ್ಥೆಗಳು ನೀಡುವ ಸಾಲಕ್ಕೆ, ಈ ಯೋಜನೆಯಡಿ ಸಾಲದ ಬಡ್ಡಿಗೆ ಸಹಾಯಧನ ಒದಗಿಸುವುದು ಹಾಗೂ ಸಾಲಕ್ಕೆ ಖಾತ್ರಿ ನೀಡುವುದು ಯೋಜನೆಯ ಮುಖ್ಯ ಉದ್ದೇಶವಾಗಿರುತ್ತದೆ. ಯಾವುದೇ ಯೋಜನೆಗೆ Capital Subsidy ಗಾಗಿ ಅನುದಾನವನ್ನು ಒದಗಿಸಲಾಗುವುದಿಲ್ಲ. ಆದಾಗ್ಯೂ, ಈ ಯೋಜನೆಯಡಿ ಕೇಂದ್ರ ಸರ್ಕಾರದಿಂದ ಬ್ಯಾಂಕ್ ಗಳಿಗೆ ನೇರವಾಗಿ ಬಡ್ಡಿ ಸಹಾಯಧನವನ್ನು (Interest subvention cost) ವಾರ್ಷಿಕ ಶೇಕಡ 3 ಗರಿಷ್ಠ ರೂ.2.00 ಕೋಟಿ, ಗರಿಷ್ಠ 7 ವರ್ಷದ ಅವಧಿಗೆ ನೀಡುವುದಾಗಿರುತ್ತದೆ.<br><br>ರಾಜ್ಯದಲ್ಲಿ ಕೃಷಿ ಇಲಾಖೆಯು ಈ ಯೋಜನೆಗೆ ನೋಡಲ್ ಇಲಾಖೆಯಾಗಿ ಆಯ್ಕೆಯಾಗಿದ್ದು ಯೋಜನೆಯ ಮೇಲುಸ್ತುವಾರಿಗಾಗಿ ಯೋಜನಾ ನಿರ್ವಹಣಾ ಘಟಕವನ್ನು (PMU) ಸ್ಥಾಪಿಸಲಾಗಿರುತ್ತದೆ. ಕೇಂದ್ರ ಸರ್ಕಾರದಿಂದ ಯೋಜನಾ ನಿರ್ವಹಣಾ ಘಟಕದ ಆಡಳಿತಾತ್ಮಕ ವೆಚ್ಚಕ್ಕಾಗಿ ರೂ1.00 ಕೋಟಿ ಅನುದಾನ ಬಿಡುಗಡೆಯಾಗಿದ್ದು, ಈ ಅನುದಾನದಲ್ಲಿ ಯೋಜನೆಯ ಪ್ರಚಾರಕ್ಕಾಗಿ ಪ್ರತಿ ಜಿಲ್ಲೆಗೆ ರೂ1.00 ಲಕ್ಷದಂತೆ ಒಟ್ಟು ರೂ.30.00 ಲಕ್ಷಗಳನ್ನು ಹಾಗೂ ಇನ್ನುಳಿದ ಅನುದಾನವನ್ನು ರಾಜ್ಯ ಮಟ್ಟದಲ್ಲಿ ಯೋಜನೆಯ ಪ್ರಚಾರ ಮತ್ತು ಯೋಜನಾ ಮೇಲ್ವಿಚಾರಣಾ ಘಟಕದ ಆಡಳಿತಾತ್ಮಕ ವೆಚ್ಚಕ್ಕಾಗಿ ಭರಿಸಲಾಗುತ್ತಿದೆ. |
| ಆ) | ರಾಜ್ಯಕ್ಕೆ ಕೇಂದ್ರ ಸರ್ಕಾರದ ಈ ಯೋಜನೆ ಅಡಿ ಕೊಯ್ಲು ನಂತರ ಕಲ್ಪಿಸಬೇಕಾಗಿರುವ ಮೂಲಸೌಕರ್ಯಗಳಿಗೆ ದೊರೆತಿರುವ ಅನುದಾನವೆಷ್ಟು ಹಾಗೂ ಈ ಅನುದಾನವನ್ನು ಯಾವ ರೀತಿ ಬಳಸಿಕೊಳ್ಳಲಾಗಿದೆ? (ಜಿಲ್ಲಾವಾರು ಮತ್ತು ವರ್ಷವಾರು ಪೂರ್ಣ ಮಾಹಿತಿ ನೀಡುವುದು) | |

ಸಂಖ್ಯೆ: ಕೃಇ 115 ಕೃಉಇ 2022

(ಬಿ.ಸಿ. ಪಾಟೀಲ್)
ಕೃಷಿ ಸಚಿವರು